# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-6508/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 06/04/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಹರಿದಾಸ್ ಭಟ್, ನಿಟ್ಟೂರು ಅಂಚೆ, ಉಡುಪಿ ತಾಲ್ಲೂಕು ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಹರಿದಾಸ್ ಭಟ್ ಇವರು ಉಡುಪಿ ಜಿಲ್ಲೆಯ ಗೌರವಾನ್ವಿತ ಉಪಲೋಕಾಯುಕ್ತರ ದೂರುಗಳ ಸ್ವೀಕಾರ ಕ್ಯಾಂಪ್‌ನಲ್ಲಿ ದೂರೊಂದನ್ನು ಸಲ್ಲಿಸಿ, ಶ್ರೀ ಶ್ರೀಕಾಂತ್‌ರಾವ್, ಪೌರಾಯುಕ್ತರು, ಉಡುಪಿ ನಗರಸಭೆ, ಉಡುಪಿ ಇವರ ವಿರುದ್ಧ ಆರೋಪಿಸಿ ಸದರಿ ದೂರನ್ನು ಸಲ್ಲಿಸಿದ್ದು, ಅದರಲ್ಲಿ ಉಡುಪಿ ನಗರಸಭೆಯ ವ್ಯಾಪ್ತಿಯ ನಿಟ್ಟೂರು ವಾರ್ಡಿನ ಗುಂಡಿಬೈಲು ಪ್ರದೇಶದ ತಮ್ಮ ಮನೆ ಮತ್ತು ತೋಟದ ಸರ್ವೇ ನಂಬರ್:82/4 ರ ಜಾಗದ ಪಕ್ಕದಲ್ಲಿ ಯಾವುದೇ ಪರವಾನಗೆ ಪಡೆಯದೇ ಅನಧೀಕೃತವಾಗಿ ವಲಸಿಗ ಕಾರ್ಮಿಕರಿಗಾಗಿ ಗುಡಿಸಲುಗಳ ಕಾಲೋನಿ ನಿರ್ಮಿಸಲು ತೊಡಗಿರುತ್ತಾರೆಂದು, ಇದರಿಂದ ತಮ್ಮ ಮನೆಗಿದ್ದ ಕಾಲುದಾರಿಯು ಮುಚ್ಚಲ್ಪಟ್ಟಿದ್ದು, ತಮ್ಮ ಕೃಷಿ ಕಾರ್ಯಕ್ಕೆ ತೊಂದರೆ ಉಂಟಾಗಿರುತ್ತದೆ ಎಂದು ಈ ಬಗ್ಗೆ ಪರಿಹಾರ ಕೋರಿ ಎದುರುದಾರರಿಗೆ ಅರ್ಜಿ ಸಲ್ಲಿಸಿ ವಿನಂತಿಸಿದ್ದರೂ ಎದುರುದಾರರು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಈ ಹಂತದಲ್ಲಿ ಉಡುಪಿ ನಗರಸಭೆ ಪೌರಾಯುಕ್ತರಾದ ಶ್ರೀ ಶ್ರೀಕಾಂತ್‌ರಾವ್‌ರವರು ಈಗಾಗಲೇ ದೂರುದಾರರ ಅರ್ಜಿಯ ಮೇಲೆ ಕ್ರಮ ಕೈಗೊಂಡಿರುವುದಾಗಿ ಹಾಗೂ ಅನಧೀಕೃತ ಗುಡಿಸಲುಗಳನ್ನು ನಿರ್ಮಿಸಿರುವವರ ವಿರುದ್ಧ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಂಡು ಎರಡು ತಿಂಗಳ ಒಳಗಾಗಿ ಕ್ರಮ ಜರುಗಿಸುವುದಾಗಿ ನಿವೇದಿಸಿಕೊಂಡಿರುತ್ತಾರೆ ಹಾಗೂ ಈ ಬಗ್ಗೆ ಮುಚ್ಚಳಿಕೆ ಪತ್ರವನ್ನು ನೀಡಿರುತ್ತಾರೆ.

ಅದರಂತೆ, ಹಲವಾರು ಅವಕಾಶ ನೀಡಿದ ನಂತರ ಉಡುಪಿಯ ನಗರಸಭೆ ಪೌರಾಯುಕ್ತರಿಂದ ವರದಿ ಬಂದಿದ್ದು, ಅದರಲ್ಲಿ, ದೂರುದಾರರಾದ ಶ್ರೀ ಹರಿದಾಸ್ ಭಟ್.ಕೆ ಇವರು ನೀಡಿದ ಅರ್ಜಿಯ ಮೇರೆಗೆ ದಿ:04/06/2014 ರಂದು ತಮ್ಮ ಕಛೇರಿಯಿಂದ ಸ್ಥಳ ಪರಿಶೀಲನೆಗಾಗಿ ಕಿರಿಯ ಅಭಿಯಂತರರು ಸ್ಥಳಕ್ಕೆ ಭೇಟಿ ನೀಡಿ ವರದಿಯನ್ನು ನೀಡಿರುತ್ತಾರೆ. ಅದರಂತೆ, ದಿ:09/06/2014 ರಂದು ಅನಧೀಕೃತವಾಗಿ ವಲಸೆ ಕಾರ್ಮಿಕರಿಗೆ ಗುಡಿಸಲು ಹಾಗೂ ಮನೆ ಕಟ್ಟುವ ಬಗ್ಗೆ ಪರವಾನಗೆ ಪ್ರತಿಯನ್ನು ಹಾಜರುಪಡಿಸಲು ಹಾಗೂ ಕಾಮಗಾರಿಯನ್ನು ಸ್ಥಗಿತಗೊಳಿಸಲು ನೋಟೀಸ್ ನೀಡಲಾಗಿರುತ್ತದೆ. ಸದರಿ ನೋಟಿಸ್ ನಂತೆ ಶ್ರೀಮತಿ ಹೇಮಲತಾ ಶೆಡ್ತಿ ಮತ್ತು ಇತರರು ಪ್ರಾಧಿಕಾರದಿಂದ ಏಕ ನಿವೇಶನ ಮಂಜೂರಾತಿ ಮತ್ತು ವಸತಿ ಕಟ್ಟಡ ಕಟ್ಟಲು ತಾಂತ್ರಿಕ ಮಂಜೂರಾತಿಯನ್ನು ಪಡೆದುಕೊಂಡು ನಗರಸಭೆಗೆ ಸಲ್ಲಿಸಿರುವುದರಿಂದ ನಗರಸಭೆಯಿಂದ ದಿ:17/11/2014 ರಂದು ಪರವಾನಗಿಯನ್ನು ನೀಡಲಾಗಿರುತ್ತದೆ.

3. ತದನಂತರ, ಶ್ರೀ ಹರಿದಾಸ್ ಭಟ್‌ರವರು ಪುನ: ದೂರು ಅರ್ಜಿಯನ್ನು ನೀಡಿದ್ದರಿಂದ, ಅದರಂತೆ, ಕಛೇರಿಯ ಕಿರಿಯ ಅಭಿಯಂತರರು ದಿ:06/12/2014 ರಂದು ಸ್ಥಳ ಪರಿಶೀಲಿಸಿ ಪರವಾನಗಿಗೆ ವ್ಯತಿರಿಕ್ತವಾಗಿ ನಿರ್ಮಾಣ ಮಾಡಿರುವ ಕಟ್ಟಡವನ್ನು ತೆರವುಗೊಳಿಸುವಂತೆ ನೋಟೀಸ್ ನೀಡಲಾಗಿರುತ್ತದೆ. ಇದಕ್ಕೆ ಶ್ರೀಮತಿ ಹೇಮಲತಾ ಇವರು ದಿ:27/03/2015 ರಂದು ಸಮಜಾಯಿಷಿ ನೀಡಿದ್ದು, ಸದರಿ ಸಮಜಾಯಿಷಿಯನ್ನು ತಿರಸ್ಕರಿಸಿ ದಿ:12/05/2015 ರಂದು ಹಿಂಬರಹವನ್ನು ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಇದಲ್ಲದೇ, ದೂರುದಾರರು ಅರ್ಜಿಯಲ್ಲಿ ತಿಳಿಸಿರುವಂತೆ ಕಾಲುದಾರಿ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ವ್ಯವಹರಿಸಿ ಪರಿಹಾರ ಕಂಡು ಕೊಳ್ಳಬೇಕಾಗಿ ಸದರಿ ದೂರುದಾರರಿಗೆ ಮೌಖಿಕವಾಗಿ ತಿಳಿಸಲಾಗಿರುತ್ತದೆ. ಆದ್ದರಿಂದ, ತಮ್ಮ ವಿರುದ್ಧದ ಈ ಪ್ರಕರಣವನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

4. ಸದರಿ ವರದಿಯ ಆಧಾರದ ಮೇಲೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿರುವುದಿಲ್ಲ.

5. ದೂರಿನಂಶಗಳನ್ನು, ಎದುರುದಾರರು ಸಲ್ಲಿಸಿರುವ ವರದಿಯ ಅಂಶಗಳನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಉಡುಪಿ ನಗರಸಭೆಯ ನಿಟ್ಟೂರು ವಾರ್ಡಿನ ಮನೆ ನಂಬರ್ 6-40ರ ಮನೆ ಸರ್ವೇ ನಂ.82/4ಬಿ ಯಲ್ಲಿ ಇರುತ್ತದೆ. ಸದರಿ ಮನೆಯ ಪಕ್ಕದಲ್ಲಿ ಶ್ರೀಮತಿ ಹೇಮಲತಾ ಶೆಡ್ತಿಯವರು ಗದ್ದೆಯನ್ನು ಹೊಂದಿದ್ದು, ಅದರಲ್ಲಿ ಅನಧೀಕೃತವಾಗಿ ವಲಸೆ ಕಾರ್ಮಿಕರಿಗೆ ಗುಡಿಸಲು ಕಟ್ಟಲು ಪ್ರಾರಂಭಿಸಿರುವುದು ಹಾಜರುಪಡಿಸಿರುವ ಫೋಟೋಗಳಿಂದ ಕಂಡು ಬರುತ್ತದೆ. ಸರ್ವೇ ನಂಬರ್ 82/4ಬಿ ಯ ಆರ್‌ಟಿಸಿ ಯನ್ನು ಪರಿಶೀಲಿಸಿದಲ್ಲಿ ಸದರಿ ಸರ್ವೇ ನಂಬರಿನ ಜಮೀನಿನ ಒಟ್ಟು ವಿಸ್ತೀರ್ಣ 4.32 ಎಕರೆ ಇದ್ದು, ಅದರಲ್ಲಿ ಶ್ರೀಮತಿ ಹೇಮಲತಾ ಶೆಡ್ತಿಯವರಿಗೆ 0.26 ಎಕರೆ ಅವರ

ಪಾಲಿಗೆ ಖಾತೆಯಾಗಿರುವುದು ಕಂಡು ಬರುತ್ತದೆ. ಸದರಿಯವರು ಶ್ರೀಮತಿ ಮೇರಿ ಸಲ್ಡಾನ ಇವರ ಕುಟುಂಬದ ಶಾಖೆ ಎಂದು ಸಹ ತೋರಿಸಲಾಗಿರುತ್ತದೆ. ಇವರನ್ನು ಹೊರತುಪಡಿಸಿ ಇನ್ನಿತರೆ ಆರು ಜನ ವಾರಸುದಾರರ ನಡುವೆ ಸದರಿ ಜಮೀನು ಹಂಚಿಕೆಯಾಗಿರುವುದು ಕಂಡು ಬರುತ್ತದೆ. (ಸದರಿ ಆರ್‌ಟಿಸಿ ಪ್ರತಿಯನ್ನು ಹಾಜರುಪಡಿಸಲಾಗಿದೆ).

6. ಶ್ರೀಮತಿ ಪದ್ಮಾಕ್ಷಿ ವಿ. ಭಟ್ ಇವರು ಜಿಲ್ಲಾಧಿಕಾರಿಗಳಿಗೆ ದಿ:21/02/2012ರಲ್ಲಿ ಮನವಿಯನ್ನು ಸಲ್ಲಿಸಿದ್ದು, ಅದರಲ್ಲಿ ಶ್ರೀಮತಿ ಹೇಮಲತಾ ಶೆಡ್ತಿಯವರು ತಮ್ಮ 26 ಸೆಂಟ್ಸ್ ನೀರಾವರಿ ಗದ್ದೆಯ ಭೂ ಪರಿವರ್ತನೆ ಕಾರ್ಯಕ್ಕೆ ಮುಂದಾಗಿದ್ದು, ವಲಸೆ ಕಾರ್ಮಿಕರಿಗೆ ಗುಡಿಸಲು ಸಮೂಹವನ್ನು ನಿರ್ಮಿಸಲು ಉದ್ದೇಶಿಸಿರುತ್ತಾರೆ. ಇದು ತಮ್ಮ ಕೃಷಿ ಕಾರ್ಯ ಹಾಗೂ ಶಾಂತಿಯ ಬದುಕಿಗೆ ಕಂಟಕ ಪ್ರಾಯವಾಗಿರುತ್ತದೆ. ಇದರಿಂದ ತಮಗೆ ಇದ್ದ ಕಾಲುದಾರಿಯು ಇಲ್ಲದೇ ತಮಗೆ ತೊಂದರೆಯಾಗುತ್ತದೆ. ತನ್ನ ಇಳಿವಯಸ್ಸಿನಲ್ಲಿ ಶಾಂತಿಯ ಬದುಕಿಗೆ ಭಂಗ ಉಂಟಾಗುತ್ತಿದ್ದು, ಇದಕ್ಕೆ ಸೂಕ್ತ ಹಾಗೂ ಯುಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ. ಸದರಿ ಶ್ರೀಮತಿ ಪದ್ಮಾಕ್ಷಿಯವರು ದೂರುದಾರರ ತಾಯಿ ಎಂದು ಸದರಿ ಪತ್ರದಿಂದ ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ಪೌರಾಯುಕ್ತರು, ಉಡುಪಿ ನಗರಸಭೆ ಯವರು ಶ್ರೀಮತಿ ಹೇಮಲತಾ ಶೆಡ್ತಿಯವರಿಗೆ ನೋಟೀಸನ್ನು ನೀಡಿ ಅದರಲ್ಲಿ ಉಡುಪಿ ತಾಲ್ಲೂಕು ಪುತ್ತೂರು ಗ್ರಾಮದ ಸರ್ವೆ ನಂಬರ್ 82 ರಲ್ಲಿ ನೀರಾವರಿ ಗದ್ದೆಯಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವುದು ಕಂಡು ಬಂದಿರುತ್ತದೆ ಎಂದು, ಸದರಿ ಅನಧೀಕೃತವಾಗಿ ನಿರ್ಮಾಣ ಮಾಡುತ್ತಿರುವ ಕಟ್ಟಡ ಕಾಮಗಾರಿಯಲ್ಲಿ ಅನಧೀಕೃತವಾಗಿ ಪಂಚಾಂಗ ಕಾಮಗಾರಿ ಮಾಡುತ್ತಿರುವುದು ಕಂಡು ಬಂದಿದೆ ಎಂದು ಆದ್ದರಿಂದ, ನೋಟೀಸ್ ತಲುಪಿದ ಕೂಡಲೇ ಕಾಮಗಾರಿಯನ್ನು ನಿಲ್ಲಸತಕ್ಕದ್ದೆಂದು ಹಾಗೂ ಮಾಡಿರುವ ಕಾಮಗಾರಿಯನ್ನು 7 ದಿವಸಗಳ ಒಳಗೆ ತೆರವು ಮಾಡಬೇಕೆಂದು ತಿಳಿಸಿರುತ್ತಾರೆ. (ಸದರಿ ನೋಟೀಸ್ ಪ್ರತಿಯನ್ನು ಹಾಜರುಪಡಿಸಲಾಗಿದೆ).

7. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ ಇವರು ಸದರಿ ಶ್ರೀಮತಿ ಹೇಮಲತಾ ಶೆಡ್ತಿ ಇವರಿಗೆ ಪುತ್ತೂರು ಗ್ರಾಮದ ಸರ್ವೆ ನಂ.82/4ಬಿ1 ರ 0.10 ಎಕರೆ ಕ್ಷೇತ್ರದಲ್ಲಿ ವಸತಿ ಉದ್ದೇಶಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮೀಣಾ ಯೋಜನಾ ಅಧಿನಿಯಮದ ಕಲಂ 13 ಹಾಗೂ ತಿದ್ದುಪಡಿ ಕಾಯ್ದೆ 2004ರ ಪ್ರಕರಣ 13ಇ ಪ್ರಕಾರ ಏಕವಿನ್ಯಾಸ ನಕ್ಷೆಯ ಅಭಿವೃದ್ಧಿಗಾಗಿ ಅನುಮತಿ ನೀಡಿರುವುದು ಕಂಡು ಬರುತ್ತದೆ. (ಸದರಿ ಏಕವಿನ್ಯಾಸ ನಕ್ಷೆಯ ಅಭಿವೃದ್ಧಿ ಅನುಮತಿ ಪತ್ರವನ್ನು ಹಾಜರುಪಡಿಸಲಾಗಿದೆ). ಶ್ರೀಮತಿ ಹೇಮಲತಾ ಶೆಡ್ತಿ ಇವರು ಕಟ್ಟಡ ನಿರ್ಮಾಣಕ್ಕಾಗಿ ಕಟ್ಟಡ ಪರವಾನಗೆ ಮಂಜೂರಾತಿ ಪತ್ರವನ್ನು ಪೌರಾಯುಕ್ತರು, ಉಡುಪಿ ನಗರಸಭೆ ಇವರಿಂದ ಪಡೆದಿದ್ದು, ಸದರಿ ಮಂಜೂರಾತಿ ಪತ್ರವನ್ನು

ಹಾಜರುಪಡಿಸಲಾಗಿದೆ. ಇದಾದ ನಂತರ ಶ್ರೀಮತಿ ಹೇಮಲತಾ ಶೆಡ್ತಿಯವರು ಮಂಜೂರಾದ ನಕಾಶೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಮಾಡಿರುವ ಬಗ್ಗೆ ಉಡುಪಿ ನಗರಸಭೆಯ ಪೌರಾಯುಕ್ತರು ಶ್ರೀಮತಿ ಹೇಮಲತಾ ಶೆಡ್ತಿಯವರಿಗೆ ಅನಧೀಕೃತ ಕಟ್ಟಡವನ್ನು ತೆರವುಗೊಳಿಸಿ ತಮ್ಮ ಕಛೇರಿಗೆ ವರದಿ ಸಲ್ಲಿಸುವಂತೆ ಸೂಚಿಸಿ ನೋಟೀಸ್ ನೀಡಿರುತ್ತಾರೆ. (ಸದರಿ ನೋಟೀಸ್‌ನ ಪ್ರತಿಯನ್ನು ಹಾಜರುಪಡಿಸಲಾಗಿದೆ). ಅದರಂತೆ, ದಿ:12/05/2015 ರಂದು ಪೌರಾಯುಕ್ತರು ಉಡುಪಿ ನಗರಸಭೆ ಇವರು ಶ್ರೀಮತಿ ಹೇಮಲತಾ ಶೆಡ್ತಿಯವರು ನೋಟೀಸ್‌ಗೆ ನೀಡಿದ್ದ ಸಮಜಾಯಿಷಿಯನ್ನು ತಿರಸ್ಕರಿಸಿ ಅನಧೀಕೃತವಾಗಿ ಕಟ್ಟಿರುವ ಕಟ್ಟಡದ ಭಾಗವನ್ನು ತೆರವುಗೊಳಿಸಿ ತಮ್ಮ ಕಛೇರಿಗೆ ವರದಿ ಸಲ್ಲಿಸುವಂತೆ ಸೂಚಿಸಿ ಹಿಂಬರಹವನ್ನು ನೀಡಿರುತ್ತಾರೆ. (ಸದರಿ ಹಿಂಬರಹದ ಪ್ರತಿಯನ್ನು ಹಾಜರುಪಡಿಸಲಾಗಿದೆ).

8. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ತಿಳಿಸಿರುವ ಶ್ರೀಮತಿ ಹೇಮಲತಾ ಶೆಡ್ತಿಯವರು ಪುತ್ತೂರು ಗ್ರಾಮದ ಸರ್ವೇ ನಂಬರ್ 82/4ಬಿ1 ಯ ಗದ್ದೆಯನ್ನು ಅಂದರೆ 0.26 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿಯೇತರ ಚಟುವಟಿಕೆಗೆ ಪರಿವರ್ತಿಸಲು ಕೋರಿ ಅರ್ಜಿ ಸಲ್ಲಿಸಿದ್ದು, ಅದರಂತೆ, ನಗರಾಭಿವೃದ್ಧಿ ಪ್ರಾಧಿಕಾರದವರು ಶ್ರೀಮತಿ ಹೇಮಲತಾ ಶೆಡ್ತಿಯವರಿಗೆ ತಾತ್ಪೂರಿಕ ಅನುಮತಿಯನ್ನು ನೀಡಿದ್ದು, ಅದು ಎರಡು ವರ್ಷಗಳವರೆಗೆ ಮಾನ್ಯತೆ ಇರುವುದೆಂದು ತಿಳಿಸಿರುವುದು ಕಂಡು ಬರುತ್ತದೆ. (ಸದರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ನೀಡಲಾದ ಹಿಂಬರಹದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ಶ್ರೀಮತಿ ಹೇಮಲತಾ ಶೆಡ್ತಿಯವರು ಅನಧೀಕೃತವಾಗಿ ಕಟ್ಟಡ ಕಟ್ಟಿರುವುದು ಕಂಡು ಬರುತ್ತದೆ. ಈ ಬಗ್ಗೆ ಉಡುಪಿ ನಗರಸಭೆಯ ಆಗಿನ ಪೌರಾಯುಕ್ತರು ಸೂಕ್ತ ಕ್ರಮ ಜರುಗಿಸಿ ದಾಖಲೆಗಳನ್ನು ನಿರ್ವಹಿಸಬೇಕಾಗಿದ್ದು, ಈ ರೀತಿ ದಾಖಲೆಗಳನ್ನು ನಿರ್ವಹಿಸದೇ ಇರುವ ಬಗ್ಗೆ ಪ್ರಕರಣದ ಕಡತಗಳಿಂದ ಹಾಗೂ ಮೇಲೆ ಚರ್ಚಿಸಿದ ಕಾರಣಗಳಿಂದ ಕಂಡು ಬರುತ್ತದೆ ಹಾಗೂ ದೂರುದಾರರು ತಿಳಿಸಿರುವ ಅವರ ಪಕ್ಕದ ಜಮೀನಿನ ಸರ್ವೇ ನಂಬರ್ 82/4ಬಿ ಯ ಜಾಗವನ್ನು ಅತಿಕ್ರಮಿಸಿ ಶ್ರೀಮತಿ ಹೇಮಲತಾ ಶೆಡ್ತಿಯವರು ಕಟ್ಟಡ ನಿರ್ಮಾಣ ಮಾಡಿರುವುದು ಕಂಡು ಬರುತ್ತದೆ. ಆದರೆ, ಇದುವರೆಗೂ ನಗರಸಭಾ ವತಿಯಿಂದ ಕಟ್ಟಡ ತೆರವಿಗೆ ಕ್ರಮ ಜರುಗಿಸದೇ ಇರುವುದು ಕಂಡು ಬರುತ್ತದೆ. ದೂರುದಾರರು ತಿಳಿಸಿರುವಂತಹ ಕಾಲುದಾರಿಯು ಅನಾಧಿಕಾಲದಿಂದಲೂ ಇರುವ ಬಗ್ಗೆ ಯಾವುದೇ ದಾಖಲೆಯನ್ನು ದೂರುದಾರರು ಹಾಜರುಪಡಿಸಿರುವುದಿಲ್ಲ. ಸದರಿ ಕಾಲುದಾರಿಯು ಖಾಸಗಿ ವ್ಯಕ್ತಿಗೆ ಸೇರಿದ ಜಮೀನಿನಲ್ಲಿರುತ್ತದೆಯೋ ಅಥವಾ ಸಾರ್ವಜನಿಕರ ಕಾಲುದಾರಿ ರಸ್ತೆಯಾಗಿರುತ್ತದೆಯೋ ಎಂಬುದರ ಬಗ್ಗೆ ಯಾವುದೇ ಸ್ಪಷ್ಟ ದಾಖಲೆಗಳು ಇರುವುದಿಲ್ಲ. ಸದರಿ ರಸ್ತೆಯಲ್ಲಿ ದೂರುದಾರರಿಗೆ ಓಡಾಡಲು ಅವಕಾಶ ಕಲ್ಪಿಸಲಾಗಿತ್ತೇ ಇಲ್ಲವೇ ಎನ್ನುವ ಬಗ್ಗೆ ದೂರುದಾರರು ಸಹ

ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ರಸ್ತೆಯ ಬಗ್ಗೆ ಸಿವಿಲ್ ಪ್ರಕರಣ ಹೂಡಲು ದೂರುದಾರರಿಗೆ ತಿಳಿಸಲಾಗಿತ್ತು ಎಂದು ತಮ್ಮ ವರದಿಯಲ್ಲಿ ಎದುರುದಾರರು ತಿಳಿಸಿರುತ್ತಾರೆ. ಸದರಿ ರಸ್ತೆಯ ಮೇಲೆ ದೂರುದಾರರಿಗೆ ರಸ್ತೆ ಬಳಸುವ ಹಕ್ಕು ಇತ್ತು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಸದರಿ ರಸ್ತೆಯ ಬಗ್ಗೆ ದೂರುದಾರರು ಸಿವಿಲ್ ಪ್ರಕರಣವನ್ನು ಹೂಡಿ ಪರಿಹಾರ ಕಂಡು ಕೊಳ್ಳಬೇಕಾಗಿರುತ್ತದೆ.

**9.** ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಶ್ರೀಮತಿ ಹೇಮಲತಾ ಶೆಡ್ತಿಯವರು ಅನಧೀಕೃತವಾಗಿ ಕಟ್ಟುತ್ತಿರುವ ಕಟ್ಟಡಗಳ ತೆರವಿಗೆ ಈಗಾಗಲೇ ಉಡುಪಿ ನಗರಸಭೆಯ ವತಿಯಿಂದ ನೋಟೀಸ್ ನೀಡಲಾಗಿದ್ದು, ಅದರಂತೆ, ಕಾನೂನಿನಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

6/4/17

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**

06/4/17